ಪ್ರ-72 (82)

**ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎ.ತಿಪ್ಪೇಸ್ವಾಮಿ., ರವರು ರವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಪೌರಾಡಳಿತ ಮತ್ತು ಸಕ್ಕರೆ ಸಚಿವರ ಉತ್ತರ.**

**ವಿಷಯ:**

ರಾಜ್ಯದಲ್ಲಿ Manual Scavenging ಪದ್ಧತಿ ಇನ್ನೂ ಜಾರಿಯಲ್ಲಿದ್ದು, ಕೇಂದ್ರ **ಸರ್ಕಾರದ ನೀತಿಯಂತೆ 2020ರ ಅಂತ್ಯದೊಳಗೆ** Scavenging ವೃತ್ತಿಯನ್ನು ನಿರ್ಮೂಲ ಮಾಡಲು ಆದೇಶವಿದ್ದರೂ ಇನ್ನೂವರೆಗೂ ಈ ವೃತ್ತಿ ಜಾರಿಯಲ್ಲಿರುತ್ತದೆ. ಅಲ್ಲದೆ ಇದೇ ವೃತ್ತಿಯಲ್ಲಿ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ Manual Scavenging ಮರಣ ಪ್ರಕರಣಗಳು ಪತ್ತೆಯಾಗಿದ್ದು, ಕಳೆದ 10 ವರ್ಷಗಳಲ್ಲಿ ಸುಮಾರು 39 ಜನರು ಮರಣ ಹೊಂದಿರುವುದಾಗಿ ಸಹ ತಿಳಿಸಲಾಗಿದೆ. ಅಲ್ಲದೆ ರಾಷ್ಟ್ರೀಯ ಸಫಾಯಿಕರ್ಮಚಾರಿ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಸಹಯೋಗದೊಂದಿಗೆ 12 ಜಿಲ್ಲೆಗಳಲ್ಲಿ ನಡೆಸುತ್ತಿರುವ ಸಮೀಕ್ಷೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಒಟ್ಟು 604 Manual Scavengers ನೇಮಕಾತಿ ನಿಷೇಧ ಹಾಗೂ ಅವರ ಪುನರ್ವಸತಿ ಕಾಯ್ದೆ ಜಾರಿಯಲ್ಲಿದ್ದರೂ ಸಂಪೂರ್ಣವಾಗಿ Manual Scavenging ಅನ್ನು ನಿಷೇಧಿಸಿದ್ದು, Septic Tank ಅನ್ನು ಸ್ವಚ್ಛಗೊಳಿಸುವ ನೂತನ ಯಂತ್ರಗಳಿದ್ದರೂ, ಇವುಗಳನ್ನು ಬಳಕೆ ಮಾಡಿಕೊಳ್ಳದೆ ಮಾನವ ಹಕ್ಕುಗಳ ದುರ್ಬಳಕೆ ಮತ್ತು ಮರಣಕ್ಕೆ ಕಾರಣವಾಗಿರುವ ಅಂಶಗಳ ಹಿನ್ನಲೆಯಲ್ಲಿ ಸಾರ್ವಜನಿಕ ಹಿತದೃಷ್ಟಿಯ ಬಗ್ಗೆ.

**ಉತ್ತರ:**

ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ವೃತ್ತಿ ನಿಷೇಧ ಮತ್ತು ಪುನರ್ವಸತಿ ಕಾಯ್ದೆ 2013 ರೀತ್ಯಾ ರಾಜ್ಯ ಸರ್ಕಾರವು ಅಧಿಸೂಚನೆ ಸಂಖ್ಯೆ: SWD 237 SDC 2012(3), ಬೆಂಗಳೂರು ದಿನಾಂಕ: 03-05-2014 ಯನ್ನು ಹೊರಡಿಸಿದ್ದು, ಅದರ ರೀತ್ಯಾ ರಾಜ್ಯದ ನಗರಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮಲ ಹೊರುವ ಪದ್ಧತಿಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಯಾವುದೇ ವ್ಯಕ್ತಿ, ಸ್ಥಳೀಯ ಪ್ರಾಧಿಕಾರ/ಸಂಸ್ಥೆಯು, ಒಳಚರಂಡಿ ಅಥವಾ ಸೆಪ್ಟಿಕ್ ಟ್ಯಾಂಕ್‌ಗಳ ಅಪಾಯಕಾರಿ ಸ್ವಚ್ಛತೆಯನ್ನು (Hazardous Cleaning) ಮಾಡಲು ಯಾವುದೇ ವ್ಯಕ್ತಿಯನ್ನು ನೇರವಾಗಿ ಅಥವಾ ಪರೋಕ್ಷವಾಗಿ ನೇಮಿಸಿಕೊಳ್ಳದಂತೆ ಅಥವಾ ತೊಡಗಿಸಿಕೊಳ್ಳದಂತೆ ಸೂಚಿಸಲಾಗಿರುತ್ತದೆ. ಎಲ್ಲಾ ಸ್ಥಳೀಯ ಸಂಸ್ಥೆಗಳು, ಒಳಚರಂಡಿ, ಸೆಪ್ಟಿಕ್ ಟ್ಯಾಂಕ್‌ಗಳು ಹಾಗು ಇತರೆ ಜಾಗಗಳನ್ನು ಸೂಕ್ತ ಸಲಕರಣೆಗಳನ್ನು ಬಳಸಿ ಸ್ವಚ್ಛ ಮಾಡುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಪ್ರಸ್ತುತ 280 ನಗರಸ್ಥಳೀಯ ಸಂಸ್ಥೆಗಳಲ್ಲಿ 416 ವಿವಿಧ ಮಾದರಿಯ ಸಕ್ಷನ್/ ಜೆಟ್ಟಿಂಗ್ ಯಂತ್ರಗಳನ್ನು ಖರೀದಿಸಿ ಉಪಯೋಗಿಸಲಾಗುತ್ತಿದೆ.

ಕಳೆದ 28 ವರ್ಷಗಳಲ್ಲಿ ಒಳಚರಂಡಿ/ ಸೋಕ್ ಪಿಟ್ ಸ್ವಚ್ಛಗೊಳಿಸುವಾಗ 41 ಮರಣ ಪ್ರಕರಣಗಳು ವರದಿಯಾಗಿದ್ದು, ಇವುಗಳನ್ನು ಪರಿಶೀಲಿಸಿದಾಗ ಬಹುತೇಕವಾಗಿ ನಗರವ್ಯಾಪ್ತಿಯಲ್ಲಿನ ಹೋಟೆಲ್, ಮನೆ ಮಾಲಿಕರು ನಗರಸ್ಥಳೀಯ ಸಂಸ್ಥೆಗಳಿಗೆ ತಿಳಿಸದೆ ತಮ್ಮ ಸೆಪ್ಟಿಕ್‌ಟ್ಯಾಂಕ್/ಪಿಟ್‌ಗಳನ್ನು ಸ್ವಚ್ಛಗೊಳಿಸಲು ಖಾಸಗಿ ವ್ಯಕ್ತಿಗಳನ್ನು ನೇಮಿಸಿಕೊಂಡು ಅಸುರಕ್ಷತೆಯಿಂದ ಸ್ವಚ್ಛಗೊಳಿಸುವಾಗ ಮರಣಹೊಂದಿರುವುದಾಗಿ ಕಂಡುಬಂದಿರುತ್ತದೆ. ಜನಸಾಮಾನ್ಯರಿಗೆ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೇಧ ಹಾಗು ಅವರ ಪುನರ್ವಸತಿ ಕಾಯ್ದೆ 2013ಯ ದಂಡ ನಿಬಂಧನೆಗಳ ಬಗ್ಗೆ ಹಾಗು ಸೆಪ್ಟಿಕ್‌ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸುವ ಯಂತ್ರಗಳ ಲಭ್ಯತೆ ಬಗ್ಗೆ ಅರಿವು ಇಲ್ಲದಿರುವುದು ಇಂತಹ ದುರಾದೃಷ್ಟಕರ ಸಂಗತಿಗಳಿಗೆ

ಕಾರಣವಾಗಿರುವುದು ಗಮನಿಸಲಾಗಿದೆ. ಈ ನಿಟ್ಟಿನಲ್ಲಿ ಜನ ಸಾಮಾನ್ಯರಿಗೆ ಇದರ ಬಗ್ಗೆ ಅರಿವು ಮೂಡಿಸಲು ಪತ್ರಿಕಾ ಪ್ರಕಟಣೆಗಳು, ಆಟೋ ಪ್ರಚಾರ, ಕೇಬಲ್ ಟಿ.ವಿ, ರೇಡಿಯೋ ಕಾರ್ಯಕ್ರಮಗಳ ಮೂಲಕ ವ್ಯಾಪಕವಾಗಿ ಪ್ರಚಾರ ಮಾಡಲು ತಿಳಿಸಿದ್ದು, ಅದರಂತೆ ಎಲ್ಲಾ ನಗರಸ್ಥಳೀಯ ಸಂಸ್ಥೆಗಳು ಕ್ರಮವಹಿಸುತ್ತಿವೆ.

ಮುಂದುವರೆದು ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್‌ನಿಂದಾಗಿ ಕೆಲಸಗಾರರು ಮರಣ ಹೊಂದುತ್ತಿರುವ ಪ್ರಕರಣಗಳನ್ನು ತಡೆಗಟ್ಟುವ ಸಲುವಾಗಿ ಸರ್ಕಾರದಿಂದ ಈ ಕೆಳಕಂಡಂತೆ ಕ್ರಮವಹಿಸಲಾಗಿರುತ್ತದೆ.

- ಎಲ್ಲಾ ನಗರಸ್ಥಳೀಯ ಸಂಸ್ಥೆಗಳಲ್ಲಿ ವ್ಯಾಪ್ತಿಯಲ್ಲಿ ಒಳಚರಂಡಿ/ಸೆಪ್ಟಿಕ್‌ಟ್ಯಾಂಕ್‌ಗಳ ಸ್ವಚ್ಛತೆಯಲ್ಲಿ ತೊಡಗಿರುವ ಕೆಲಸಗಾರರು, ಸಕ್ಷನ್/ಜೆಟ್ಟಿಂಗ್ ಯಂತ್ರಗಳ ಆಪರೇಟರ್, ಮೇಲ್ವಿಚಾರಕರು, ಓರ್ವ ಟೆಲಿಫೋನ್ ಆಪರೇಟರ್ ಹಾಗೂ ಸಂಬಂಧಪಟ್ಟ ಕಿರಿಯ / ಸಹಾಯಕ ಅಭಿಯಂತರರನ್ನು ಒಳಗೊಂಡ ತಂಡ Emergency Responsible Sanitation Unit (ERSU) ತಂಡಗಳನ್ನು 276 ನಗರಗಳಲ್ಲಿ ರಚಿಸಲಾಗಿದೆ.
- ನಗರ ಪ್ರದೇಶಗಳಲ್ಲಿ ಮ್ಯಾನುಯಲ್ ಸ್ಕ್ಯಾವೆಂಜಿಂಗ್ ಪದ್ಧತಿಯನ್ನು ನಿರ್ಮೂಲನೆ ಮಾಡಿ, ಸುರಕ್ಷತೆಯಿಂದ ಒಳಚರಂಡಿ ಅಥವಾ ಸೆಪ್ಟಿಕ್ ಟ್ಯಾಂಕ್ ಸ್ವಚ್ಛಗೊಳಿಸುವುದನ್ನು ಖಾತರಿಪಡಿಸಿಕೊಳ್ಳಲು ಆಯಾಯ ಜಿಲ್ಲೆಗಳ ಜಿಲ್ಲಾಧಿಕಾರಿಗಳನ್ನು ಜವಾಬ್ದಾರಿಯುತ ನೈರ್ಮಲ್ಯ ಪ್ರಾಧಿಕಾರ (Responsible Sanitation Authority) ಎಂದು ಸರ್ಕಾರದ ಆದೇಶದ ಸಂಖ್ಯೆ :ನಅಇ 144 ಜಿಇಎಲ್ 2017, ಬೆಂಗಳೂರು ದಿನಾಂಕ: 10-02-2021 ರೀತ್ಯಾ ನೇಮಿಸಲಾಗಿರುತ್ತದೆ.
- ಎಲ್ಲಾ ನಗರಸ್ಥಳೀಯ ಸಂಸ್ಥೆಗಳಲ್ಲಿ ERSU ತಂಡದ ಮೂಲಕವೇ ಒಳಚರಂಡಿ ಮಷಿನ್‌ಹೋಲ್ ಸ್ವಚ್ಛಗೊಳಿಸುವಂತೆ ಕಟ್ಟುನಿಟ್ಟಾಗಿ ತಿಳಿಸಲಾಗಿರುತ್ತದೆ. ಸದರಿ ತಂಡಕ್ಕೆ ಅಗತ್ಯ ತರಬೇತಿಯನ್ನು ನೀಡಿ, ಮ್ಯಾನ್ಯುಯಲ್ ಸ್ಕ್ಯಾವೆಂಜರ್ ವೃತ್ತಿ ನಿಷೇಧ ಮತ್ತು ಪುನರ್ವಸತಿ ನಿಯಮಗಳು 2013 ರಲ್ಲಿ ಸೂಚಿಸಲಾದ ಸುರಕ್ಷಾ ಪರಿಕರಗಳನ್ನು ಒದಗಿಸುವಂತೆ ತಿಳಿಸಲಾಗಿರುತ್ತದೆ.
- ಒಂದು ವೇಳೆ ಸ್ವಚ್ಛತಾ ಕೆಲಸಗಾರರು ಸುರಕ್ಷತಾ ಪರಿಕರಗಳಿಲ್ಲದೆ ಕಾರ್ಯನಿರ್ವಹಿಸುವುದು ಕಂಡುಬಂದಲ್ಲಿ ಸಂಬಂಧಪಟ್ಟ ಗುತ್ತಿಗೆದಾರರ ವಿರುದ್ಧ ರೂ 10,000/- ದಂಡ ವಿಧಿಸಲು ಹಾಗು ಖಾಯಂ ಪೌರಕಾರ್ಮಿಕರಾದಲ್ಲಿ ಸಂಬಂಧಪಟ್ಟ ಆರೋಗ್ಯ ನಿರೀಕ್ಷಕರ ವಿರುದ್ಧ ಶಿಸ್ತಿನ ಕ್ರಮಜರುಗಿಸಲು ಪೌರಾಡಳಿತ ನಿರ್ದೇಶನಾಲಯದ ಪತ್ರದ ಸಂಖ್ಯೆ: 88:ಡಿ.ಎಂ.ಎ/15/ಎಸ್‌ಡಬ್ಲುಎಂ/2013-14, ದಿನಾಂಕ: 08-01-2021 ರೀತ್ಯಾ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ನೀಡಲಾಗಿರುತ್ತದೆ. ಸುರಕ್ಷತಾ ಪರಿಕರಗಳನ್ನು ನೀಡದೆ STP ಗಳಲ್ಲಿ ಕೆಲಸ ಮಾಡಿಸುತ್ತಿದ್ದಲ್ಲಿ, ಅಂತಹ ಏಜನ್ಸಿ/ಗುತ್ತಿಗೆದಾರರಿಗೆ ಪ್ರತಿ ಪ್ರಕರಣಕ್ಕೆ ರೂ 50,000/- ದಂಡ ವಿಧಿಸಲು ಸಕ್ಷಮ ಪ್ರಾಧಿಕಾರಿಗಳಿಗೆ ಸರ್ಕಾರದ ಆದೇಶದ ಸಂಖ್ಯೆ: ನಅಇ 41 ಜಿಇಎಲ್ 2021, ಬೆಂಗಳೂರು, ದಿನಾಂಕ 24-02-2021 ರೀತ್ಯಾ ಸೂಚನೆ ನೀಡಲಾಗಿರುತ್ತದೆ.
- ನಗರ ವ್ಯಾಪ್ತಿಯಲ್ಲಿ ಕಾರ್ಯಾಚರಿಸುತ್ತಿರುವ ಖಾಸಗಿ ಸಂಸ್ಥೆಗಳನ್ನು ಗುರುತಿಸಿ, ತರಬೇತಿ ಪಡೆದ ಆಪರೇಟರ್ ಮೂಲಕವೇ ಸೆಪ್ಟಿಕ್ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸುವುದನ್ನು ಖಾತರಿ ಪಡಿಸಿಕೊಳ್ಳಲು ತಿಳಿಸಲಾಗಿರುತ್ತದೆ.

- ನಗರ ವ್ಯಾಪ್ತಿಯಲ್ಲಿ ಯಾವುದೇ ಸಂದರ್ಭದಲ್ಲಿಯೂ ಒಳಚರಂಡಿ ಗಳನ್ನು ಸ್ವಚ್ಛಗೊಳಿಸುವಾಗ ಪೌರಕಾರ್ಮಿಕರನ್ನಾಗಲಿ ಅಥವಾ ಇತರೆ ಕೆಲಸಗಾರರನ್ನಾಗಲಿ ಮಷಿನ್‌ಹೋಲ್ ಒಳಗೆ ಇಳಿಸದಂತೆ ಯುಜಿಡಿ ನಿರ್ಮಾಣದ ಗುತ್ತಿಗೆದಾರರು, ಯುಜಿಡಿ ವ್ಯವಸ್ಥೆಗಳ ನಿರ್ವಹಣೆ ಗುತ್ತಿಗೆದಾರರು, ಸಂಬಂಧಪಟ್ಟ ಮೇಲ್ವಿಚಾರಕರು ಅಭಿಯಂತರರುಗಳಿಗೆ ಕಟ್ಟುನಿಟ್ಟಾದ ಆದೇಶ ನೀಡಲು ತಿಳಿಸಲಾಗಿರುತ್ತದೆ.
- ಆದರೆ 'ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ವೃತ್ತಿ ನಿಷೇಧ ಮತ್ತು ಪುನರ್ವಸತಿ ನಿಯಮಗಳು, 2013 ರ ನಿಯಮ (3) ರಲ್ಲಿ ತಿಳಿಸಿರುವ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಮಷಿನಹೋಲ್ ಒಳಗೆ ಮನವ ಪ್ರವೇಶ ಅಗತ್ಯವಿರುತ್ತದೆ. ಅಂತಹ ಸಂದರ್ಭಗಳಲ್ಲಿ ಜವಾಬ್ದಾರಿಯುತ ನೈರ್ಮಲ್ಯ ಪ್ರಾಧಿಕಾರ ಎಂದು ನೇಮಿಸಿರುವ ಜಿಲ್ಲಾಧಿಕಾರಿಗಳ ಅನುಮತಿ ಪಡೆದು ಎಲ್ಲಾ ಸುಕ್ಷತಾ ಕ್ರಮಗಳನ್ನು ಅನುಸರಿಸಿ ಯಾವುದೇ ಅವಘಡಗಳು ಸಂಭವಿಸದಂತೆ ಬಹಳ ಎಚ್ಚರಿಕೆಯಿಂದ ಸ್ವಚ್ಛತೆಯನ್ನು ಕೈಗೊಳ್ಳುವಂತೆ ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 45 ಜಿಇಎಲ್ 2021, ದಿನಾಂಕ: 26–02–2021 ರೀತ್ಯಾ ಎಲ್ಲಾ ನಗರಸ್ಥಳೀಯ ಸಂಸ್ಥೆಗಳಿಗೆ ಸೂಚನೆಯನ್ನು ನೀಡಲಾಗರುತ್ತದೆ.
- ರಾಜ್ಯದ ಎಲ್ಲಾ ಮಹಾನಗರಪಾಲಿಕೆಗಳಲ್ಲಿ ಸಾರ್ವಜನಿಕರು ಒಳಚರಂಡಿ ಸೆಪ್ಟಿಕ್ ಟ್ಯಾಂಕ್ ಸ್ವಚ್ಛತೆ ಕುರಿತಾಗಿ ದೂರು ದಾಖಲಿಸಲು ಸಹಾಯಕವಾಗುವಂತೆ 1440 ರಾಷ್ಟ್ರೀಯ ಸಹಾಯವಾಣಿಯನ್ನು ನಿಗಧಿಪಡಿಸಿದ್ದು, ಪಾಲಿಕೆ ಸಹಾಯವಾಣಿಗೆ ಸಂಯೋಜಿಸಲಾಗಿರುತ್ತದೆ. ರಾಜ್ಯದ ಇತರೆ ಎಲ್ಲಾ ನಗರಸ್ಥಳೀಯ ಸಂಸ್ಥೆಗಳಲ್ಲಿ ಈ ಸೌಲಭ್ಯವನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ.

ರಾಜ್ಯದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ವೃತ್ತಿಯಲ್ಲಿ ತೊಡಗಿರುವವರನ್ನು ಗುರುತಿಸಿ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ವತಿಯಿಂದ ಸೂಕ್ತ ಪುನರ್ವಸತಿ ಸೌಲಭ್ಯ ಕಲ್ಪಿಸಲು ಕ್ರಮವಹಿಸಲಾಗುತ್ತಿದೆ. ಇನ್ನು ಮುಂದೆ ರಾಜ್ಯದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್‌ನಿಂದಾಗಿ ಕೆಲಸಗಾರರು ಮರಣ ಹೊಂದುತ್ತಿರುವ ಪ್ರಕರಣಗಳು ಮರುಕಳಿಸದಂತೆ ಸರ್ಕಾರದಿಂದ ಎಲ್ಲಾ ಅಗತ್ಯ ಕ್ರಮವಹಿಸಲಾಗುತ್ತಿದೆ.

**ಸಂಖ್ಯೆ:** ನಅಇ 20 ಜಿಇಎಲ್ 2021

(ಎನ್.ನಾಗರಾಜು, ಎಂ.ಟಿ.ಬಿ)
ಪೌರಾಡಳಿತ ಮತ್ತು ಸಕ್ಕರೆ ಸಚಿವರು